**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 26.08.2022.</u>**
**<u>ಮುಂದುವರೆದ ಪಾಟೀ ಸವಾಲುಃ 12, 15 ರಿಂದ 18 ನೇ ಪ್ರತಿವಾದಿ ಪರ ಶ್ರೀಮತಿ.ಎಂವಿಪಿ ವಕೀಲರಿಂದಃ</u>**

18. ನಾನು 2 ನೇ ತರಗತಿವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ ಭಾಷ್ವೆ ಓದಲು ಬರೆಯಲು ಬರುವುದಿಲ್ಲ. ನಾನು ಜ್ಯೋತಿಬಾ ನಾರಾಯಣ ಗುರವ ಎಂದು ಮರಾಠಿ ಭಾಷ್ವೆಯಲ್ಲಿ ಪೂರ್ಣ ಹೆಸರ ಸಹಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಜ್ಯೋತಿಬಾ ನಾರಾಯಣ ಗುರವ ಎಂದು ಮರಾಠಿ ಭಾಷ್ವೆಯಲ್ಲಿ ಪೂರ್ಣ ಹೆಸರ ಸಹಿ ಮಾಡುತ್ತಿದ್ದೆ ಅದರಂತೆ ಪ್ರತಿವಾದಿ 11 ರವರಿಗೆ ಬರೆದುಕೊಟ್ಟ ಖರೀದಿ ಪತ್ರದಲ್ಲಿ ಸಹ ನಾನು ಅದೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿಕೊಟ್ಟ ವಿಚಾರವನ್ನು ತಪ್ಪಿ ಸಲು ಈಗ ಜೆ.ಎನ. ಗುರವ ಎಂದು ಸಹಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮೊದಲಿನಿಂದಲೂ ನಾನು ಜೆ.ಎನ.ಗುರವ ಎಂದು ಸಹಿ ಮಾಡುತ್ತೇನೆ ಎಂದು ಹೇಳುತ್ತಾರೆ. ಪ್ರತಿವಾದಿ 11 ಮತ್ತು 12 ರವರ ಹೆಸರಿನಲ್ಲಿರುವ ಖರೀದಿ ಪತ್ರವನ್ನು ನೀವು ಎಲ್ಲಿಯೂ ಪ್ರಶ್ನೀಸಿಲ್ಲ ಎಂದರೆ ಸಾಕ್ಷಿಯು ಈ ದಾವೆಯಲ್ಲಿ ಪ್ರಶ್ನೀಸಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿ 11 ಮತ್ತು 12 ರವರ ಹೆಸರಿನಲ್ಲಿ ಖರೀದಿ ಪತ್ರದ ಆಧಾರದ ಮೇರೆಗೆ ಮ್ಯುಟೇಶನ ಆಗಿದ್ದು ಅದನ್ನು ನೀವು ಎಲ್ಲಿಯೂ ಪ್ರಶ್ನೀಸಿಲ್ಲ ಎಂದರೆ ಸಾಕ್ಷಿಯು ಈ ದಾವೆಯಲ್ಲಿ ಪ್ರಶ್ನೀಸಿದ್ದೇನೆ ಎಂದು ಹೇಳುತ್ತಾರೆ. ಸರ್ವೆ ನಂ. 117/, 113/3 ಎ, 116/3 ಎ ಆಸ್ತಿಗಳು ನಿಮ್ಮ ಕುಟುಂಬಕ್ಕೆ ಸಂಬಂಧ ಪಟ್ಟಿದೆಯೇ, ನಿಮಗೂ ಸದರಿ ಆಸ್ತಿಗಳಲ್ಲಿ ಭಾಗ ಇದೆಯೇ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಇರಬಹುದು ನನಗೆ ನಿಖರವಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಸರ್ವೆ ನಂ. 117/, 113/3 ಎ, 116/3 ಎ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ನಮ್ಮ ಕುಟುಂಬಕ್ಕೆ ಸಂಬಂಧ ಪಟ್ಟ ಆಸ್ತಿಗಳನ್ನು ಸೇರಿಸಿದ್ದೇನೆ ಎಂದು ಹೇಳುತ್ತಾರೆ. ಸರ್ವೆ ನಂ. 121/4 ವಿ. 2 ಎಕರೆ 9 ಗುಂಟೆಯ ಚೆಕಬಂದಿ ಹೇಳಲು ಬರುವುದಿಲ್ಲ. ಸರ್ವೆ ನಂ. 121/4 ಹಾಗೂ 121/2 ರ ಜಮೀನುಗಳಲ್ಲಿ ನನಗೆ ಪಾಲು ಹಕ್ಕು ಇಲ್ಲ ಹಾಗೂ ನಾವು ಸದರಿ ಜಮೀನಿನ ಸ್ವಾಧೀನದಲ್ಲಿ ಸಹ ಇಲ್ಲ ಎಂದರೆ ಸರಿಯಲ್ಲ. ನಾವು ವಾದಿಯರು ಹಾಗೂ ಪ್ರತಿವಾದಿ 1 ರಿಂದ 3 ಕೂಡಿಕೊಂಡು ಈ ಖೊಟ್ಟಿ ದಾವೆ ಸಲ್ಲಿಸಿದ್ದೇವೆ ಎಂದರೆ

ಸರಿಯಲ್ಲ. ಪ್ರತಿವಾದಿ 15 ರಿಂದ 18 ರವರು ಸರ್ವೆ ನಂ. 121/2 ವಿ. 4 ಎಕರೆ ಜಮೀನು ನ್ಯಾಯಾಲಯದ ಮೂಲಕ ಖರೀದಿಸಿರುವ ವಿಚಾರ ಗೋತ್ತಿದ್ದರು ಸಹ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ 121/4 ಜಮೀನನ್ನು ನಾನು ನನ್ನ ಸಹೋದರ ಹಾಗೂ ತಾಯಿ ಖರೀದಿ ಪತ್ರ ಮಾಡಿಕೊಟ್ಟಿದ್ದರು ಸಹ ಈ ಸುಳ್ಳು ದಾವೆ ಹಾಕಿದ್ದೆನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ವಿಷಯಗಳನ್ನು ಬರೆಯಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ಮತ್ತು ಜೆಎಂಎಫ ಸಿ ನ್ಯಾಯಾಧೀಶರು**
**ಖಾನಾಪೂರ.**